ಭ್ರಷ್ಟ ನೌಕರರಿಗೆ ಅಮಾನತು ಶಿಕ್ಷೆ ಖಚಿತ

ಮೊದಲ ಪುಟದಿಂದ ◄┘

ಇವರೆಲ್ಲರ ಅರ್ಜಿಗಳ ವಿಚಾರಣೆ ವೇಳೆ ಲೋಕಾಯುಕ್ತ ಸಂಸ್ಥೆ ಪರ ವಕೀಲರಾದ ವೆಂಕಟೇಶ್ ಪಿ. ದಳವಾಯಿ ಹಾಗೂ ಪುಷ್ಪಲತಾ, ಎರಡು ದಿನಕ್ಕಿಂತ ಹೆಚ್ಚು ಕಾಲ ನ್ಯಾಯಾಂಗ ಬಂಧನದಲ್ಲಿದ್ದ ಸರ್ಕಾರಿ ನೌಕರರನ್ನು ಸೇವೆಯಿಂದ ಅಮಾನತುಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಲು ಬಲವಾಗಿ ವಾದಿಸಿದರು.

ವಕೀಲರ ವಾದವನ್ನು ಗಂಭೀರವಾಗಿ ಪರಿಗಣಿಸಿದ ಹೈಕೋರ್ಟ್, ಲಂಚ ಪ್ರಕರಣದಲ್ಲಿ ಎರಡು ದಿನ ಮೀರಿ ಜೈಲುವಾಸ ಅನುಭವಿಸಿದ ಸರ್ಕಾರಿ ನೌಕರರನ್ನು ಸೇವೆಯಿಂದ ಅಮಾನತು ಮಾಡಲು ಸರ್ಕಾರಕ್ಕೆ ನಿರ್ದೇಶಿಸಿದೆ. ಕಳೆದ ಎರಡು ತಿಂಗಳಲ್ಲಿ ಲಂಚ ಪ್ರಕರಣದಲ್ಲಿ ಜೈಲುವಾಸ ಅನುಭವಿಸಿದ ಅನೇಕ ಸರ್ಕಾರಿ ನೌಕರರು ಸಲ್ಲಿಸಿದ್ದ ಜಾಮೀನು ಅರ್ಜಿ ಆದೇಶದಲ್ಲಿ ಹೈಕೋರ್ಟ್ ಈ ವಿಚಾರವನ್ನು ಸ್ಪಷ್ಟವಾಗಿ ಉಲ್ಲೇಖಿಸಿಯೇ ಜಾಮೀನು ನೀಡುತ್ತಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಲೋಕಾಯುಕ್ತ ಪರ ಅಭಿಯೋಜಕರಾದ ವೆಂಕಟೇಶ್ ಪಿ. ದಳವಾಯಿ, ‘ಲಂಚ ಪ್ರಕರಣದಲ್ಲಿ ಜೈಲುವಾಸ ಅನುಭವಿಸಿದ ನೌಕರರನ್ನು ಅಮಾನತು ಮಾಡದೇ ಹೋದಲ್ಲಿ, ಜಾಮೀನು ಪಡೆದ ನಂತರ ಆ ನೌಕರ ಮತ್ತೆ ತನ್ನ ಹುದ್ದೆಯಲ್ಲಿ ಮುಂದುವರಿಯುತ್ತಾರೆ. ಆಗ ತಮ್ಮ ಅಧಿಕಾರ ದುರ್ಬಳಕೆ ಮಾಡಿ ಪ್ರಕರಣದ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ ಅಥವಾ ತಿರುಚಲು ಯತ್ನಿಸಬಹುದು’ ಎನ್ನುತ್ತಾರೆ.

ಹೈಕೋರ್ಟ್ ನಿರ್ದೇಶನದ ಹಿನ್ನೆಲೆಯಲ್ಲಿ, ಭ್ರಷ್ಟಾಚಾರ ಆರೋಪದ ಹಿನ್ನೆಲೆಯಲ್ಲಿ ಬಂಧನಕ್ಕೊಳಗಾದ ಹಾಗೂ ಆಗಬಹುದಾದ ಸರ್ಕಾರಿ ನೌಕರರು ಇನ್ನು ಮುಂದೆ ದೀರ್ಘಕಾಲದ ಅಮಾನತಿಗೆ ಸಿದ್ಧರಿರಬೇಕಾಗುತ್ತದೆ.

ಕೆಸಿಎಸ್ಆರ್ ನಿಯಮ

ಕ್ರಿಮಿನಲ್ ಪ್ರಕರಣ ಸೇರಿ ಯಾವುದೇ ಪ್ರಕರಣದಲ್ಲಿ 48 ಗಂಟೆಗಳ ಕಾಲ ನ್ಯಾಯಾಂಗ ಬಂಧನದಲ್ಲಿದ್ದ (ಜೈಲು) ಸರ್ಕಾರಿ ನೌಕರ ನಂತರ ಜಾಮೀನು ಪಡೆದು ಸೇವೆಗೆ ಹಾಜರಾದರೂ ಸಕ್ಷಮ ಪ್ರಾಧಿಕಾರಗಳು ಆ ನೌಕರರನ್ನು ಸೇವೆಯಿಂದ ಅಮಾನತುಗೊಳಿಸಬೇಕು. ಪ್ರಕರಣ ದಾಖಲಾದ ನಂತರದ ಆರು ತಿಂಗಳಲ್ಲಿ ತನಿಖಾಧಿಕಾರಿಗಳು ನೌಕರರ ವಿರುದ್ಧ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು ಅಥವಾ ಆರು ತಿಂಗಳಲ್ಲಿ ನ್ಯಾಯಾಲಯ ಪ್ರಕರಣದ ವಿಚಾರಣೆ ಆರಂಭಿಸಬೇಕು. ಇದಕ್ಕೆ ತಪ್ಪಿದಲ್ಲಿ ಆರು ತಿಂಗಳ ನಂತರ ನೌಕರರ ಅಮಾನತು ಆದೇಶವನ್ನು ಸರ್ಕಾರ ಹಿಂಪಡೆಯಬಹುದು.

> ಕೆಸಿಎಸ್ಆರ್ ನಿಯಮದಂತೆ ಕ್ರಿಮಿನಲ್ ಪ್ರಕರಣದಲ್ಲಿ ಜೈಲಿನಲ್ಲಿದ್ದ ಸರ್ಕಾರಿ ನೌಕರರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ. ಹೀಗಾಗಿ ಒಮ್ಮೆ ಈ ಕುರಿತು ಹೈಕೋರ್ಟ್ ಆದೇಶಿಸಿದರೆ ಅದನ್ನು ಸರ್ಕಾರ ಪಾಲಿಸುವುದು ಕಡ್ಡಾಯ. ಆಗ ಮಾತ್ರ ನೌಕರರು ಭವಿಷ್ಯದಲ್ಲಿ ಮತ್ತದೇ ತಪ್ಪು ಮಾಡದಿರಲು ಸಾಧ್ಯ.
>
> • **ವೆಂಕಟೇಶ್ ಪಿ.ದಳವಾಯಿ,**
> ಲೋಕಾಯುಕ್ತ ಸಂಸ್ಥೆ ಪರ ವಕೀಲರು

> ಈ ರೀತಿಯ ಕ್ರಿಮಿನಲ್ ಪ್ರಕರಣದಲ್ಲಿ ತಪ್ಪಿತಸ್ಥನ ವಿರುದ್ಧ ದೋಷಾರೋಪ ಪಟ್ಟಿ ಸಿದ್ಧಪಡಿಸಿ, ತನಿಖೆ ಪೂರ್ಣಗೊಳ್ಳಬೇಕಾದರೆ ಸಾಕಷ್ಟು ಸಮಯ ಹಿಡಿಯುತ್ತದೆ. ತನಿಖೆ ಪೂರ್ಣಗೊಳ್ಳುವವರೆಗೂ ಆರೋಪಿಯನ್ನು ಅಮಾನತಿನಲ್ಲಿಡಬಹುದು. ಆದ್ದರಿಂದ ತನಿಖೆ ಪ್ರಕ್ರಿಯೆ ಚುರುಕುಗೊಳಿಸುವುದೊಂದೇ ಇದಕ್ಕೆ ಪರಿಹಾರ.
>
> • **ಎ.ಎಸ್.ಪೊನ್ನಣ್ಣ**, ಹೆಚ್ಚುವರಿ ಅಡ್ವೊಕೇಟ್ ಜನರಲ್

ಕುಂದಾನಗರೀಲಿ ನಡೆಯಲಿ ಚರ್ಚೆ



ಬಾಧೆ ಬೀಳೋದು ತಪ್ಪಲ್ಲ... ರೈತರ ಸರಣಿ ಆತ್ಮಹತ್ಯೆಗಳ ನಡುವೆಯೇ ವಿಧಾನ ಮಂಡಲ ಮಳೆಗಾಲದ ಅಧಿವೇಶನಕ್ಕೆ ಬೆಳಗಾವಿ ಸಜ್ಜಾಗಿದೆ. ಸುವರ್ಣಸೌಧ ಎದುರು ರೈತರೊಬ್ಬರು ಭಾನುವಾರ ಎತ್ತುಗಳೊಂದಿಗೆ ಹೊಲಕ್ಕೆ ತೆರಳುತ್ತಿರುವ ಈ ಚಿತ್ರ ‘ಯಾರೇ ರಾಜ್ಯ ಆಳಿದರೂ ರಾಗಿ ಬೀಸೋದು ತಪ್ಪಲ್ಲ’ ಎಂಬ ಮಾತನ್ನು ನೆನಪಿಸುವಂತಿದೆ. ಕೆಪಿಎನ್ ಚಿತ್ರ

ಮೊದಲ ಪುಟದಿಂದ ◄┘

ಅಷ್ಟೇ ಅಲ್ಲ, ಸಂಪುಟದ ಕೆಲವು ಸಹೋದ್ಯೋಗಿಗಳ ಮಾಲೀಕತ್ವದ ಕಾರ್ಖಾನೆಗಳ ಸಕ್ಕರೆ ಜಪ್ತಿಯಾಗದಿರುವುದು ಸರ್ಕಾರವನ್ನು ಮುಜುಗರಕ್ಕೀಡು ಮಾಡಿದೆ. ಈ ಮಧ್ಯೆ ಸರ್ಕಾರದಲ್ಲಿನ ಕೆಲವರ ಹೇಳಿಕೆಗಳು ತೀರ ಅಭಾಸ ಎನಿಸಿವೆ. ಈ ಕಾರಣಕ್ಕಾಗಿ ಬಹುತೇಕ ಶಾಸಕ, ಸಚಿವರಿಗೆ ಈ ಕಬ್ಬು, ಸಕ್ಕರೆ, ರೈತರ ಸರಣಿ ಆತ್ಮಹತ್ಯೆ ಪ್ರಕರಣಗಳು ಮುಜುಗರ ಹುಟ್ಟಿಸಿದ್ದರಿಂದ ಅವರ್‍ಯಾರೂ ಮಾಧ್ಯಮಗಳ ಎದುರು ಬರುತ್ತಿಲ್ಲ. ಒಂದರ್ಥದಲ್ಲಿ ಸರ್ಕಾರದ ಪರವಾಗಿ ಮಾತನಾಡುವವರು, ಮುಖ್ಯಮಂತ್ರಿಗಳ ನಿಲುವನ್ನು ಸಮರ್ಥಿಸಿಕೊಳ್ಳುವವರೇ ಇನ್ನವೇನೋ ಎನ್ನುವಷ್ಟು ಖಾಲಿತನ ಕಾಂಗ್ರೆಸ್ಸನ್ನು ಕಾಡುತ್ತಿದೆ.

ಇದೇ ವೇಳೆ ಪಾದಯಾತ್ರೆ, ಬಹಿರಂಗ ಸಭೆ, ಸುದ್ದಿಗೋಷ್ಠಿಗಳ ಮೂಲಕ ಅಬ್ಬರಿಸುತ್ತಿರುವ ಪ್ರತಿಪಕ್ಷಗಳ ದನಿ ಬಲು ಜೋರಿನಿಂದ ಕೇಳಿ ಬರುತ್ತಿದ್ದರಿಂದ ಬೀಸೋ ದೊಣ್ಣೆ ತಪ್ಪಿಕೊಳ್ಳುವ ಸರ್ಕಾರದ ನಡೆಗೆ ಹಿನ್ನಡೆಯಾಗಿದೆ. ಹಾಗಾಗಿ ರೈತ ಸಂಘಟನೆಗಳು ಹಿಂದಿಗಿಂತ ಹೆಚ್ಚು ಶಕ್ತಿಯುತವಾಗಿ ಸರ್ಕಾರದ ವಿರುದ್ಧ ಒಗ್ಗಟ್ಟಾಗುತ್ತಿದ್ದು ಕೂಡ ಬೆಳಗಾವಿ ಇನ್ನಷ್ಟು ಬಿಸಿಯಾಗಲು ಕಾರಣವಾಗಿದೆ.

ಅಭಿವೃದ್ಧಿಗೆ ಮಂಕು: ಈ ಮಧ್ಯೆ ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿ ಕುರಿತಂತೆ ಸದನ ದಲ್ಲಿ ಒತ್ತು ನೀಡಬೇಕೆಂದು ಈ ಭಾಗದ ಹಲವು ಸಂಘಟನೆಗಳು, ಜನಪ್ರತಿನಿಧಿಗಳು ಆಗ್ರಹಿಸುತ್ತ ಬಂದಿದ್ದರು. ಆದರೆ, ಸದ್ಯದ ಪರಿಸ್ಥಿತಿ ಅವ ಲೋಕಿಸಿದರೆ ಕಬ್ಬು ಅರೆತ ಮುಗಿದರೆ ಸಾಕು ಎನ್ನುವಂತಿದೆ. ರೈತ ಆತ್ಮಹತ್ಯೆಯ ಎದುರು ಅಭಿ ವೃದ್ಧಿ, ಕಳಸಾ–ಬಂಡೂರಿ, ಸೌಧಕ್ಕೆ ಇಲಾಖೆಗಳ ಸ್ಥಳಾಂತರ, ಪ್ರತ್ಯೇಕತೆಯ ಕೂಗು ಇತ್ಯಾದಿಗಳು ಗೌಣವಾಗುವ ಸಾಧ್ಯತೆಯೂ ಹೆಚ್ಚಿದೆ.

ಧರಣಿಯಷ್ಟೇ ಅಧಿವೇಶನದ ಉದ್ದೇಶವಾಗದಿರಲಿ

ರಾಜಕೀಯ ಮೇಲಾಟದ ಬದಲಿಗೆ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಬೆಳಗಾವಿ ಅಧಿವೇಶನದಲ್ಲಿ 10 ಪ್ರಮುಖ ವಿಷಯಗಳ ಬಗ್ಗೆ ಸಮಗ್ರವಾಗಿ ಚರ್ಚಿಸಿ ಅವುಗಳಿಗೆ ಸರ್ಕಾರ ಹಾಗೂ ವಿಪಕ್ಷಗಳು ಪರಿಹಾರ ಕಂಡುಕೊಂಡರೆ ನಿಜಕ್ಕೂ ಅಧಿವೇಶನ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಕಾಟಾಚಾರಕ್ಕಾಗಿ ಸೇರಿ ಮುಗಿಸಿಕೊಂಡು ಬಂದಂತೆ ಆಗುತ್ತದೆ. ಇದನ್ನು ಪ್ರತಿಯೊಬ್ಬ ಶಾಸಕರು ಅರ್ಥ ಮಾಡಿಕೊಳ್ಳುವುದು ಸೂಕ್ತ. ಈ ನಡುವೆಯೇ ಅಧಿವೇಶನ ಹೇಗೆ ನಡೆದರೆ ಚೆನ್ನ, ಯಾವ ವಿಚಾರ ಚರ್ಚೆಯಾದರೆ ಅಧಿವೇಶನದ ಉದ್ದೇಶ ಸಾರ್ಥಕವಾದೀತು ಎಂಬ ಬಗ್ಗೆ 10 ಅಜೆಂಡಾಗಳನ್ನು ಗುರುತಿಸಲಾಗಿದೆ.

3 ರೈತರ ಆತ್ಮಹತ್ಯೆ

ಬೆಂಗಳೂರು: ವಿಧಾನ ಮಂಡಲ ಅಧಿವೇಶ ನಕ್ಕೆ ಕ್ಷಣಗಣನೆ ಆರಂಭವಾಗಿರುವ ಹೊತ್ತಲ್ಲೇ ಇನ್ನೂ ಮೂವರು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಅಲ್ಲಿಗೆ ಜೂನ್ ತಿಂಗಳಿನಲ್ಲಿಯೇ ಆತ್ಮಹತ್ಯೆ ಮಾಡಿಕೊಂಡವರ ಸಂಖ್ಯೆ 8ಕ್ಕೆ ಏರಿದೆ. ಹೊಳೆನರಸೀಪುರ ತಾಲೂಕಿನ ಜವರಿಕೊಪ್ಪಲು ಗ್ರಾಮದ ಸ್ವಾಮಿಗೌಡ (48) ತಮ್ಮ ಜಮೀನಿನ ಬಳಿಯೇ ಕೀಟನಾಶಕ ಸೇವಿಸಿದ್ದಾರೆ. ತಮಗಿದ್ದ 3 ಎಕರೆ ಜಮೀನಿನಲ್ಲಿ ಹೊಗೆಸೊಪ್ಪು ಬೆಳೆದಿದ್ದ ಅವರು, ಕಾವೇರಿ ಗ್ರಾಮೀಣ ಬ್ಯಾಂಕಿನಲ್ಲಿ ₹ 4 ಲಕ್ಷ ಸಾಲ ಮಾಡಿದ್ದರು. ಮಂಡ್ಯ ತಾಲೂಕು ಹೊನ್ನಾಯ್ಕನಹಳ್ಳಿ ಗ್ರಾಮದ ಶಿವಲಿಂಗೇಗೌಡ ಅಲಿಯಾಸ್ ಕುಮಾರ್ (37) ಜಮೀನಿನಲ್ಲಿದ್ದ ತೆರೆದ ಬಾವಿಗೆ ಹಾರಿ ಜೀವ ಬಿಟ್ಟಿದ್ದಾರೆ. ಮೂರು ಎಕರೆ ಜಮೀನಿನಲ್ಲಿ ಕಬ್ಬು, ಬತ್ತ ಬೆಳೆದಿದ್ದ ಅವರು ಮಂಡ್ಯದ ಎಸ್‌ಬಿಐ ಶಾಖೆಯಲ್ಲಿ ₹ 2.30 ಲಕ್ಷ ಸಾಲ ಮಾಡಿದ್ದರು. ಸಕ್ಕರೆ ಕಾರ್ಖಾನೆಯಿಂದ ಕಬ್ಬಿನ ಬಾಕಿಯೂ ಪಾವತಿ ಆಗಿರಲಿಲ್ಲ, ಬತ್ತಕ್ಕೂ ಸೂಕ್ತ ಬೆಲೆ ಸಿಕ್ಕಿರಲಿಲ್ಲ. ಈ ನಡುವೆ ಸಾಲ ಮರುಪಾವತಿಗೆ ಬ್ಯಾಂಕ್‌ನಿಂದ ನೋಟಿಸ್ ಬಂದಿತ್ತು. ಮುಳಗುಂದ ಸಮೀಪದ ಸೊರಟೂರ ಗ್ರಾಮದ ರೈತ ಫಕ್ಕಿರೇಶ ಮಾದೇವಪ್ಪ ದೇವಿಹಾಳ (35) ಶನಿವಾರ ರಾತ್ರಿ ವಿಷ ಸೇವಿಸಿ ಸಾವನ್ನಪ್ಪಿದ್ದಾರೆ. ಅಲ್ಲಲ್ಲಿ ಸಾಲ ಮಾಡಿದ್ದು, ತೀರಿಸಲಾಗದೇ ವಿಷ ಸೇವಿಸಿರಬಹುದೆಂದು ಕುಟುಂಬ ಸದಸ್ಯರು ತಿಳಿಸಿದ್ದಾರೆ. ಕೆಪಿಎನ್ಎಸ್

> ರಾಜ್ಯದಲ್ಲಿ ನಡೆಯುತ್ತಿರುವ ರೈತರ ಸರಣಿ ಆತ್ಮಹತ್ಯೆಗೆ ಮುಖ್ಯ ಕಾರಣವೇನು ಎಂಬುದನ್ನು ಪತ್ತೆ ಹಚ್ಚಲು ತಜ್ಞರನ್ನು ಒಳಗೊಂಡ ಸಮಿತಿ ರಚಿಸಬೇಕು. ರೈತ ಕೃಷಿಗಾಗಿ ಮಾಡಿದ ಸಾಲ ತೀರಿಸುವ ಶಕ್ತಿಯನ್ನು ಸರ್ಕಾರವೇ ಕಸಿದುಕೊಂಡಿದೆ. ಈವರೆಗೂ ರೈತನ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಲು ಸರ್ಕಾರ ಮುಂದಾಗುತ್ತಿಲ್ಲ. ಇದರಿಂದ ಸಾಲ ಮಾಡಿದ ರೈತರು ಸ್ವಾಭಿಮಾನಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.
>
> • **ಚಾಮರಸ ಮಾಲಿಪಾಟೀಲ,**
> ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಅಧ್ಯಕ್ಷ

ತ್ರಿಶಂಕು ಲೋಕಾ

ಮೊದಲ ಪುಟದಿಂದ ◄┘

ಆದರೆ, ಜೂ.26ರಂದು ಸುದ್ದಿಗೋಷ್ಠಿ ನಡೆಸಿದ ನ್ಯಾ. ಭಾಸ್ಕರ್‌ರಾವ್, ಪ್ರಕರಣದ ತನಿಖೆಯನ್ನು ಸೋನಿಯಾ ನಾರಂಗ್ ಬದಲು, ಸಿಸಿಬಿಗೆ ವಹಿಸಿದ್ದರು.

ವಿವಾದ ತಂದ ತನಿಖೆ: ಲೋಕಾಯುಕ್ತ ಹಾಗೂ ಉಪಲೋಕಾಯುಕ್ತ ನಡುವಿನ ಕಲಹ ಹಿನ್ನೆಲೆಯಲ್ಲಿ ಕಳೆದ ಒಂದು ವಾರದಿಂದ ಲೋಕಾಯುಕ್ತ ಸಂಸ್ಥೆ ತೀವ್ರ ವಿವಾದದಲ್ಲಿದೆ. ಅದರಲ್ಲೂ ಜಿಲ್ಲಾ ಪಂಚಾಯತ್ ಎಂಜಿನಿಯರ್ ಕೃಷ್ಣಮೂರ್ತಿ ಎಂಬುವರಿಗೆ ಲೋಕಾಯುಕ್ತ ಸಂಸ್ಥೆಯಲ್ಲಿದ್ದುಕೊಂಡು ₹1 ಕೋಟಿ ಲಂಚ ಕೇಳಿದ ಪ್ರಕರಣದಲ್ಲಿ ಲೋಕಾಯುಕ್ತ ನ್ಯಾ.ಭಾಸ್ಕರ್‌ರಾವ್ ಅವರ ಸಮೀಪದ ವ್ಯಕ್ತಿ ಭಾಗಿಯಾಗಿರುವ ಆರೋಪದಿಂದಾಗಿ ಪ್ರಕರಣ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಈ ಬೆಳವಣಿಗೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಯಾವ ತೀರ್ಮಾನ ಕೈಗೊಳ್ಳುತ್ತದೆ ಎಂಬುದು ಅತ್ಯಂತ ಕುತೂಹಲ ಕೆರಳಿಸಿದೆ. ಅಷ್ಟೇ ಅಲ್ಲ ಒಂದು ವೇಳೆ ರಾಜ್ಯ ಸರ್ಕಾರ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡದೇ ಮತ್ತೆ ಪ್ರಕರಣವನ್ನು ಲೋಕಾಯುಕ್ತರ ವಿವೇಚನೆಗೆ ಬಿಟ್ಟರೆ ಆಗ ನ್ಯಾ. ಭಾಸ್ಕರ್ ರಾವ್ ಅವರ ನಡೆ ಏನು? ಎಂಬುದು ಮತ್ತೊಂದು ಕುತೂಹಲ.

ರದ್ದಾದ ಸಂವಾದ: ನಿರಾಶರಾದ ಜನ

ಮೈಸೂರು: ಕರ್ನಾಟಕ ದಲಿತ ವೆಲ್‌ಫೇರ್ ಟ್ರಸ್ಟ್ ಮೈಸೂರಿನಲ್ಲಿ ಭಾನುವಾರ ಆಯೋಜಿಸಿದ್ದ ಭಗವದ್ಗೀತೆ ಮತ್ತು ರಾಮಾಯಣ ಕುರಿತು ಮುಕ್ತ ಸಂವಾದ ಕಾರ್ಯಕ್ರಮವು ರದ್ದಾಯಿತು. ಧಾರ್ಮಿಕ ಸೂಕ್ಷ್ಮ ವಿಚಾರಣೆ ಸಂಬಂಧ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲು ಪೊಲೀಸ್ ಇಲಾಖೆಯಿಂದ ಅನುಮತಿ ಪಡೆದಿರಲಿಲ್ಲ. ಅಲ್ಲದೆ, ಕಾರ್ಯಕ್ರಮಕ್ಕಾಗಿ ಎಂದು ಸಭಾಂಗಣ ಪಡೆದು, ವಿವಾದಿತ ವಿಚಾರಗಳ ಕುರಿತು ಚರ್ಚಿಸಲು ವೇದಿಕೆ ಬಳಸಿಕೊಳ್ಳುತ್ತಿದ್ದ ಹಿನ್ನೆಲೆಯಲ್ಲಿ ಎಂಎಂಸಿ ಅಮೃತ ಮಹೋತ್ಸವ ಭವನದ ಆಡಳಿತ ಮಂಡಳಿಯವರೂ ಅವಕಾಶ ನೀಡಲಿಲ್ಲ. ಕೆಪಿಎನ್ಎಸ್

‘ಸಂಘರ್ಷಕ್ಕೆ ಸರ್ಕಾರವೇ ಕಾರಣ’

ರಾಯಚೂರು: ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಪೀಠವನ್ನು ಬೆಳಗಾವಿಯಲ್ಲಿ ಸ್ಥಾಪಿಸಲು ನಿರ್ಧರಿಸುವ ಮೂಲಕ ಮುಂಬೈ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದವರ ಮಧ್ಯೆ ಮುಖ್ಯಮಂತ್ರಿಗಳೇ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿದ್ದಾರೆ ಎಂದು ಹಿರಿಯ ವಕೀಲ ಬಿ.ಡಿ. ಹಿರೇಮಠ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು. ಕೆಪಿಎನ್ಎಸ್

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಇಂಡಿ

ನಂ:ಕೃಉಮಾಸ/ಇಂ/ಅಭಿಕೆ/135/2015–16 ದಿನಾಂಕ: 26–06–2015

–: ಇ–ಪ್ರೋಕ್ಯೂರಮೆಂಟ್ ಟೆಂಡರ್ ಪ್ರಕಟಣೆ :–

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಇಂಡಿ 2015–16 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಲ್ಪಟ್ಟಿರುವ ಪ್ರಕಾರ ಮಂಜೂರಾಗಿರುವ ಈ ಕೆಳಕಂಡ ಕಾಮಗಾರಿಗೆ ಇ–ಟೆಂಡರ್ http://www.eproc.karnataka.gov.in ನಲ್ಲಿ ಈ ಸಮಿತಿಯಿಂದ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಸಂಖ್ಯೆ ನಂ.ಕೃಉಮಾಸ/ಇಂ/ಅಭಿಕೆ/114/2015–16 ದಿನಾಂಕ: 17–06–2015 ರಲ್ಲಿ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗೆ ಮೇಲ್ಕಂಡ ವೆಬ್‌ಸೈಟ್ ಹಾಗೂ ಕಛೇರಿಯನ್ನು ಸಂಪರ್ಕಿಸುವುದು.

ಕ್ರ.ಸಂ.	ಕೆಲಸದ ಹೆಸರು	ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ	ಇಎಂಡಿ ಹಣ ರೂ.ಗಳಲ್ಲಿ	ಕಾಮಗಾರಿ ಪೂರ್ಣಗೊಳಿಸುವ ಅವಧಿ	ಇ–ಟೆಂಡರ್ ಪ್ರೊಸೆಸಿಂಗ್ ಫೀ (ರೂ.ಗಳಲ್ಲಿ)	ಗುತ್ತಿಗೆದಾರರ ದರ್ಜೆ
1	ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಇಂಡಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ 01 ಸಂಖ್ಯೆ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಿಸುವ ಕಾಮಗಾರಿ	3,73,848-00	9,400-00	3 ತಿಂಗಳು (ಮಳೆಗಾಲ ಹೊರತುಪಡಿಸಿ	ಇ–ಪ್ರೊಕ್ಯೂರ್‌ಮೆಂಟ್ ರನ್ವಯ	3ನೇ ದರ್ಜೆ ಹಾಗೂ ಮೇಲ್ಪಟ್ಟ ಸಿವಿಲ್ ಗುತ್ತಿಗೆದಾರರು

1) ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 28–07–2015 ಸಾಯಂಕಾಲ 4–00 ಗಂಟೆಗೆ
2) ಆರ್ಥಿಕ ಬಿಡ್ ತೆರೆಯುವ ದಿನಾಂಕ: 30–07–2015 ಸಾಯಂಕಾಲ 4–30 ಗಂಟೆಗೆ

ಸಹಿ/– (ಎಂ.ಡಿ.ಚಬನೂರ)
ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಇಂಡಿ

ಸಹಿ/– (ಬಿ.ಎಸ್. ಕೌಲಗಿ)
ಅಧ್ಯಕ್ಷರು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,ಇಂಡಿ

BELAGAVI DISTRICT CO- OP MILK PRODUCERS SOCIETIES UNION LTD.,

nandini

MAHANTESH NAGAR, BELGAUM -590 017. KARNATAKA
Phone: 0831-2405756 Fax: 0831- 2454791 Website: www.bemul.com E – Mail: bemul.pur@gmail.com

IFT No: 106/Pur/Strengthening of Existing Refrigeration/896/2015-16 dt. 27.06.2015

THROUGH E-PROCUREMENT PORTAL TENDER NOTIFICATION

The Belagavi Milk Union Ltd., invites Tenders’ from eligible tenderers for the supply & installation of the items listed below in two cover Tender systems (Technical & Commercial) through E- Procurement system.

Sl. No	Description of Material	Qty	EMD (Rs.)
1	Supply, Installation, Testing and commissioning of Refrigeration Plant & Machinery, IBT, Atmospheric Condenser and allied works including civil work at Belgaum Dairy on Turnkey Basis.	01 Lot	5,00,000=00

Tender documents may be downloaded from e-procurement website https://eproc.karnataka.gov.in/. Interested tenderers may obtain further information at the same address. The MD BEMUL reserve the rights to accept or reject the tender without assigning any reason.

1) Access to E- Tender Documents : 29-06-2015 to 28-07-2015 up to 04:00 PM
2) Last date for Submission : 28-07-2015 up to 04:30 PM
3) Date of Opening of Tender : 31-07-2015 at 11:00 AM onwards.
4) Other details can be seen in the tender documents.

Sd/-
MANAGING DIRECTOR, BELAGAVI MILK UNION LTD.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟ

ನಂ: ಪಂರಾಇಂವಿ/ಬಾಗಲಕೋಟ/ಪಿಬಿ-1/ನಬಾರ್ಡ-19/ಟೆಂಡರ್/2015-16/681 ದಿನಾಂಕ: 25-06-2015

ಇ-ಪ್ರೊಕ್ಯೂರ್‌ಮೆಂಟ್-ಟೆಂಡರ್ ತಿದ್ದುಪಡಿ ಅಧಿಸೂಚನೆ

ವಿಷಯ: 2014-15ನೇ ಸಾಲಿನ ನಬಾರ್ಡ-19 ಯೋಜನೆ ಅಡಿ ಬಾಗಲಕೋಟ ಜಿಲ್ಲೆಯ ಬಾಗಲಕೋಟ ತಾಲೂಕಿನ ಇಂಡೆಂಟ್ ನಂ: 43549, ಕಾಮಗಾರಿಯ ಟೆಂಡರ್ ಬಗ್ಗೆ.

ಉಲ್ಲೇಖ: 1. ಈ ಕಚೇರಿಯ ಟೆಂಡರ್ ಪ್ರಕಟಣೆ ನಂ. ನಂ:ಪಂರಾಇಂವಿ/ಬಾಗಲಕೋಟ/ಪಿಬಿ-1/ನಬಾರ್ಡ-19/ಟೆಂಡರ್/2015-16/212 ದಿನಾಂಕ: 30-04-2015

ಉಲ್ಲೇಖಿತ ಟೆಂಡರ್ ಪ್ರಕಟಣೆಯಲ್ಲಿ ಆಹ್ವಾನಿಸಲಾದ 2014-15ನೇ ಸಾಲಿನ ನಬಾರ್ಡ-19 ಯೋಜನೆ ಅಡಿ ಬಾಗಲಕೋಟ ಜಿಲ್ಲೆಯ ಬಾಗಲಕೋಟ ತಾಲೂಕಿನ ಇಂಡೆಂಟ್ ನಂ:43549 ಕಾಮಗಾರಿಯ ಟೆಂಡರನಲ್ಲಿ ಈ ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.

1	ಖಾಲಿ ಟೆಂಡರ್ ಫಾರ್ಮಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿ ಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ	ದಿನಾಂಕ: 30-04-2015 ರಿಂದ 19-05-2015 ಸಾಯಂಕಾಲ 17.30 ಗಂಟೆಯವರೆಗೆ, ಬದಲಾಗಿ ದಿನಾಂಕ: **26-06-2015 ರಿಂದ 21-07-2015 ಸಾಯಂಕಾಲ 17.30 ಗಂಟೆಯವರೆಗೆ**
2	ಪ್ರೀ ಬಿಡ್ ಮೀಟಿಂಗ್	ದಿನಾಂಕ: 14-05-2015 ರಂದು ಪೂರ್ವಾಹ್ನ 11.00 ಗಂಟೆಯವರೆಗೆ **ಬದಲಾಗಿ ದಿ: 17-07-2015 ರಂದು ಪೂರ್ವಾಹ್ನ 11.00 ಗಂಟೆಯವರೆಗೆ**
3	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	ದಿನಾಂಕ: 22-05-2015 ರಂದು ಪೂರ್ವಾಹ್ನ 11.00 ಗಂಟೆಯವರೆಗೆ **ಬದಲಾಗಿ ದಿ: 23-07-2015 ರಂದು ಪೂರ್ವಾಹ್ನ 11.00 ಗಂಟೆಯವರೆಗೆ**
4	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ	ದಿನಾಂಕ: 25-05-2015 ರಂದು ಮುಂಜಾನೆ 11.00 ಗಂಟೆಯ ನಂತರ **ಬದಲಾಗಿ ದಿ: 25-07-2015 ರಂದು ಪೂರ್ವಾಹ್ನ 11.00 ಗಂಟೆಯ ನಂತರ**

: ಷರತ್ತುಗಳು:

ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ http://www.eprocurment.karnataka.gov.in ಯಲ್ಲಿ ಲಾಗ್‌ಆನ್ ಮಾಡಿ ನೋಡಬಹುದು.

ಸಹಿ/- (ಎಸ್.ಕೆ. ಕೊಳ್ಳಿ), ಕಾರ್ಯನಿರ್ವಾಹಕ ಇಂಜನೀಯರರು,
ಪಂ.ರಾ.ಇಂ. ವಿಭಾಗ, ಬಾಗಲಕೋಟ

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ ನಿಯಮಿತ

ಘಟಕ : ಪಶು ಆಹಾರ ಕಾರ್ಖಾನೆ, ರಾಜಾನುಕುಂಟೆ, ದೊಡ್ಡಬಳ್ಳಾಪುರ ರಸ್ತೆ, ಬೆಂಗಳೂರು -64.
ದೂರವಾಣಿ : 080-28468295 / 314. ಫ್ಯಾಕ್ಸ್ : 080-28468293

ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರಿ ಹಾಲು ಮಹಾಮಂಡಳಿಯ ಪಶು ಆಹಾರ ಕಾರ್ಖಾನೆ, ರಾಜಾನುಕುಂಟೆಯಲ್ಲಿ ಈ ಕೆಳಕಂಡ ಕೆಲಸಗಳಿಗೆ ಗುತ್ತಿಗೆ ನೀಡಲು ಇ–ಟೆಂಡರ್ ಆಹ್ವಾನಿಸಿದೆ.

ಸಂಖ್ಯೆ:ಕಹಾಮ/ಪಆಕಾ–ರಾ/ಉಗ್ರಾಣ/07/2015–16 ದಿನಾಂಕ: 22.06.2015

1. ಒಂದು ವರ್ಷದ ಅವಧಿಯಲ್ಲಿ ಉಪಯೋಗಿಸಿದ ಖಾಲಿ ಗೋಣಿಚೀಲಗಳ ಮಾರಾಟದ ಗುತ್ತಿಗೆ ನೀಡಲು

ಸಂಖ್ಯೆ:ಕಹಾಮ/ಪಆಕಾ–ರಾ/ಉಗ್ರಾಣ/92/2015–16 ದಿನಾಂಕ: 22.06.2015

2. ಇಲ್ಲಿನ ಉಪಹಾರ ಗೃಹದ ಅಡಿಗೆ ಮತ್ತು ಸ್ವಚ್ಚತೆ ಕೆಲಸಕ್ಕೆ ಎರಡು ವರ್ಷಕ್ಕಾಗಿ ಗುತ್ತಿಗೆ ನೀಡಲು

ಇ–ಟೆಂಡರ್ ಆಹ್ವಾನಿಸಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ವೆಬ್‌ಸೈಟ್ https://eproc.karnataka.gov.in. ಮುಖಾಂತರ ಸಲ್ಲಿಸಬಹುದು.

(1) ಟೆಂಡರ್ ಸಲ್ಲಿಸಲು ದಿ:29.06.2015 ರಿಂದ 29.07.2015 ಸಂಜೆ 5.30ರವರೆಗೆ ಸಲ್ಲಿಸಬಹುದಾಗಿರುತ್ತದೆ.

(2) ಟೆಂಡರ್ ತೆರೆಯುವ ದಿನಾಂಕ:01.08.2015 ಬೆಳಿಗ್ಗೆ 11.00ಘಂಟೆಗೆ ಪಶು ಆಹಾರ ಕಾರ್ಖಾನೆ ರಾಜಾನುಕುಂಟೆ ಘಟಕದಲ್ಲಿ. ಇ.ಎಂ.ಡಿ ಮೊಬಲಗು, ಷರತ್ತು ಮತ್ತು ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಟೆಂಡರ್ ಫಾರಂನಲ್ಲಿ ನೋಡಬಹುದಾಗಿದೆ. ದೂರವಾಣಿ ಸಂ: 28468314 / 28468295. ಮೊ. 9591994359

ಸಹಿ/– ಪ್ರಧಾನ ವ್ಯವಸ್ಥಾಪಕರು

ಕರ್ನಾಟಕ ಸರಕಾರ
(ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋ.ಬಂ. ಮತ್ತು ಒ.ಜ.ಸಾ.ಇ. ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–2/ಟೆಂಡರ/2015–16/0984, ದಿನಾಂಕ : 27–06–2015.

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋ.ಬಂ. ಮತ್ತು ಒ.ಜ.ಸಾ.ಇ. ಚಿಕ್ಕೋಡಿ ವಿಭಾಗದಡಿ ರಾಯಬಾಗ ತಾಲೂಕಿನ ಲೆಕ್ಕ ಶೀರ್ಷಿಕೆ 3054 ಯೋಜನೇತರ ರಾಜ್ಯ ಹೆದ್ದಾರಿ ನಿರ್ವಹಣೆ 2015–16 ರ ಅಡಿ 2 ಕಾಮಗಾರಿ ಹಾಗೂ 3054– ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ 2015–16 ಅಡಿ 4 ಕಾಮಗಾರಿಗಳು ಮತ್ತು 8443– ಠೇವಣಿ ವಂತಿಕೆ 2014–15 ಅಡಿ 1 ಕಾಮಗಾರಿ ಹೀಗೆ ಒಟ್ಟು 7 ಕಾಮಗಾರಿಗಳಲ್ಲಿ ಗರಿಷ್ಠ ಮೊತ್ತ ರೂ. 34.96 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 5.98 ಲಕ್ಷ, ಕ್ಕೆ ಸಂದೇಹ ಹಾಗೂ ವಿವರಣೆಗಳಿಗಾಗಿ ಕೊನೆಯ ದಿನಾಂಕ : 06–07–2015 ರ ಸಾಯಂಕಾಲ 5–30 ಗಂಟೆಯವರೆಗೆ, ಗುತ್ತಿಗೆ ಸ್ವೀಕರಿಸುವ ಕೊನೆಯ ದಿನಾಂಕ: 08–07–2015 ರ ಮಧ್ಯಾಹ್ನ 4–00 ಗಂಟೆಯವರೆಗೆ, ಹಾಗೂ ಹಣಕಾಸು ಬಿಡನ್ನು ತೆರೆಯುವ ದಿನಾಂಕ : 10–07–2015 ರ ಸಾಯಂಕಾಲ 4–30 ಗಂಟೆಗೆ, ನಿಗದಿಪಡಿಸಲಾಗಿದೆ. ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋ.ಬಂ. ಮತ್ತು ಒ.ಜ.ಸಾ.ಇ. ಇಲಾಖೆ, ವಿಭಾಗ, ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋ.ಬಂ. ಮತ್ತು ಒ.ಜ.ಸಾ.ಇ. ಚಿಕ್ಕೋಡಿ ವಿಭಾಗ ಹಾಗೂ ಕ.ರಾ.ಹೆ.ಪ್ರಾ.

ನಗರಸಭಾ ಕಾರ್ಯಾಲಯ, ಹೊಸಪೇಟೆ

ಕ್ರಸಂ/ನಸಹೊ/ಘವನಿ/ನೀಸ/ನಗರಸಭೆ ನಿಧಿ/ಟೆಂಡರ್/02/15-16
ದಿನಾಂಕ: 18-06-2015

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

2015-16ನೇ ಸಾಲಿನ ನಗರಸಭೆ ನಿಧಿ ಅನುದಾನದಲ್ಲಿ ಈ ಕೆಳಗಿನಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ-ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು. ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು www.eproc.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು, ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 04-07-2015 ಸಂಜೆ 5.00 ಗಂಟೆವರೆಗೆ. 2) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 06-07-2015 ಸಂಜೆ 5.10 ಗಂಟೆ. 3) ಟೆಂಡರ್‌ಗಳನ್ನು ತೆರೆಯುವ ಸ್ಥಳ: ನಗರಸಭೆ, **ಹೊಸೇಪಟೆ ಕಾಮಗಾರಿಯ ವಿವರ ಹಾಗೂ ಇಂಡೆಂಟೆ ನಂ:** ಹೊಸಪೇಟೆ ನಗರಸಭೆಯ ವ್ಯಾಪ್ತಿಯಲ್ಲಿ ಬರುವ ವಾರ್ಡ ನಂ: 01 ರಿಂದ 18ರವರೆಗೆ ನೈರ್ಮಾಲ್ಯ ಕೆಲಸಗಳನ್ನು ನಿರ್ವಾಹಿಸಲು 25 ಜನ ಪೌರಕಾರ್ಮಿಕರನ್ನು ಹೊರಗುತ್ತಿಗೆ ಆಧಾರದ ಮೇಲೆ ಸರಬರಾಜು ಮಾಡುವ ಕುರಿತು. **CMC/HPT/SWM/01/PK’S/TENDER/2015-16/Call-2.** ಟೆಂಡರಗಿಟ್ಟ ಅಂದಾಜು ಮೊತ್ತ: 2573334.00. ಇ.ಎಂ.ಡಿ. (90 ದಿನಗಳ ವ್ಯಾಲಿಡಿಟಿ ರೂ.ಗಳಲ್ಲಿ) 64340.00. ಟೆಂಡರ್ ಪ್ರೊಸೆಸ್ಸಿಂಗ್ ಫೀ: ಇ-ಪ್ರೊಕ್ಯೂರ್‌ಮೆಂಟ್ ನಿಗಧಿಪಡಿಸಿದಂತೆ. ಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂದನೆಗಳಿಗೆ ನಗರಸಭೆ ಕಾರ್ಯಾಲಯ ಹೊಸಪೇಟೆ ಕಛೇರಿ ಕೆಲಸದ ದಿನದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ನಗರಸಭೆ, ಹೊಸಪೇಟೆ
ಸಹಿ/- ಪೌರಾಯುಕ್ತರು ನಗರಸಭೆ, ಹೊಸಪೇಟೆ
ಸಹಿ/- ಅಧ್ಯಕ್ಷರು ನಗರಸಭೆ, ಹೊಸಪೇಟೆ

WIPRO
Applying Thought

ವಿಪ್ರೋ ಲಿಮಿಟೆಡ್

ನೋಂದಾಯಿತ ಕಛೇರಿ: ದೊಡ್ಡಕನ್ನೇಲಿ, ಸರ್ಜಾಪುರ ರಸ್ತೆ, ಬೆಂಗಳೂರು–560035.
ದೂರವಾಣಿ: +91-80-28440011: Fax: +91-80-28440054
CIN No. L32102KA1945PLC020800 ಇಮೇಲ್: info@wipro.com
ವೆಬ್‌ಸೈಟ್: http://www.wipro.com

ಸೂಚನೆ

ಈ ಮೂಲಕ ಸೂಚನೆ ನೀಡುವುದೇನೆಂದರೇ, ವಿಪ್ರೋ ಲಿಮಿಟೆಡ್‌ನ ಅರವತ್ತೊಂಭತ್ತನೆಯ ವಾರ್ಷಿಕ ಮಹಾಸಭೆಯು ದಿನಾಂಕ: ಜುಲೈ 22, 2015ರ ಬುಧುವಾರ ಸಂಜೆ 4.00 ಗಂಟೆಗೆ ವಿಪ್ರೋ ಕ್ಯಾಂಪಸ್, ಕೆಫೆಟೇರಿಯಾ ಹಾಲ್, ಇಸಿ–3, ಗ್ರೌಂಡ್ ಫ್ಲೋರ್, ಟವರ್ 8ರ ಎದುರು, ಸಂಖ್ಯೆ 72, ಕಿಯೋನಿಕ್ಸ್ ಎಲೆಕ್ಟ್ರಾನಿಕ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು–561229, ಇಲ್ಲಿ, ದಿನಾಂಕ: ಜೂನ್ 3, 2015 ರ ಸಭೆಯ ಸೂಚನಾ ಪತ್ರದಲ್ಲಿ ತಿಳಿಯಪಡಿಸಿದ ವ್ಯಾಪಾರದ ವಿಷಯಗಳ ವ್ಯವಹಾರ ನಡೆಸುವುದಕ್ಕಾಗಿ ನಡೆಯಲಿದೆ. ಸದಸ್ಯರಿಗೆ ವಾರ್ಷಿಕ ಮಹಾಸಭೆಯ ಸೂಚನಾ ಪತ್ರಗಳನ್ನು ಈಗಾಗಲೇ ರವಾನಿಸಲಾಗಿದೆ. ಲಿಸ್ಟಿಂಗ್ ಒಪ್ಪಂದದ ಖಂಡ 35ಬಿ ಇದರನ್ವಯ ಸದರಿ ನೋಟೀಸಿನಲ್ಲಿ ತಿಳಿಸಿರುವ ಎಲ್ಲಾ ಠರಾವುಗಳಿಗೆ ಸದಸ್ಯರು ಮತದಾನದ ಹಕ್ಕುಗಳನ್ನು ವಿದ್ಯುನ್ಮಾನದ ಮೂಲಕ ಚಲಾಯಿಸುವ ಸೌಲಭ್ಯವನ್ನು ಕಂಪನಿಯು ಒದಗಿಸುತ್ತಿದೆ ಎಂದು ತಿಳಿಸಲು ಹರ್ಷಿಸುತ್ತದೆ.

ಕಂಪನಿಗಳ ಕಾಯಿದೆ ಪರಿಚ್ಛೇಧ 108 ಹಾಗೂ ಲಿಸ್ಟಿಂಗ್ ಅಗ್ರಿಮೆಂಟ್‌ನ ಖಂಡ 35ಬಿ ಜೊತೆಗೆ ಓದಿಕೊಳ್ಳಬೇಕಾದ ನಿಯಮಗಳು ಹಾಗೂ ತಿದ್ದುಪಡಿಗಳಂತೆ ಕಂಪನಿಯು, ಇ–ಮತದಾನದ ಪ್ರಕ್ರಿಯೆಯನ್ನು ನೋಡಿಕೊಳ್ಳುವುದಕ್ಕಾಗಿ ಶ್ರೀ ವಿ. ಶ್ರೀಧರನ್, ವೃತ್ತಿನಿರತ ಕಂಪನಿ ಕಾರ್ಯದರ್ಶಿ ಇವರನ್ನು ಪರೀಕ್ಷಕ ರನ್ನಾಗಿ ನೇಮಿಸಲಾಗಿದೆ. ನಿಯಮಗಳ ಅವಶ್ಯಕತೆಯಂತೆ ವಿವರಗಳು ಕೆಳಕಂಡಂತಿವೆ:

1. ಸೂಚನೆ ಪತ್ರಗಳ ರವಾನೆ ಮುಕ್ತಾಯಗೊಳಿಸುವ ದಿನಾಂಕ: ಜೂನ್ 27, 2015.
2. ಡಿಪಾಜಿಟರೀಸ್‌ರವರು ನಿರ್ವಹಿಸುತ್ತಿದ್ದ ಸದಸ್ಯರುಗಳ ರಿಜಿಸ್ಟರ್ ಅಥವಾ ಫಲಾನುಭವಿ ಮಾಲೀಕರ ರಿಜಿಸ್ಟರ್‌ನಲ್ಲಿ ನಿರ್ಧರಣ ದಿನಾಂಕ ಅಂದರೆ ಜುಲೈ 15, 2015 ರಂದು ಯಾರ ಹೆಸರು ದಾಖಲಾತಿಯಲ್ಲಿದೆಯೋ ಅಂತಹ ವ್ಯಕ್ತಿಗಳು ಅದೃಶ್ಯ (ರಿಮೋಟ್) ಇ–ಮತದಾನ ಸೌಲಭ್ಯವನ್ನು ಪಡೆದುಕೊಳ್ಳಬಹುದಾಗಿದೆ.
3. ಸಭೆಯ ಸೂಚನಾ ಪತ್ರದ ರವಾನೆಯ ದಿನಾಂಕದ ನಂತರ ಕಂಪನಿಯ ಸದಸ್ಯನಾಗುವ ಯಾವುದೇ ವ್ಯಕ್ತಿ ಮತ್ತು ನಿರ್ಧರಣ ದಿನಾಂಕ ಅಂದರೆ ಜುಲೈ 15, 2015 ರಂದು ಇದ್ದಂತೆ ಷೇರುಗಳನ್ನು ಹೊಂದಿದ್ದರೆ ಕೆಳಕಂಡ ಕ್ರಮ ಅನುಸರಿಸಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ.

ಎ. ಫೋಲಿಯೋ ಸಂಖ್ಯೆ/ಡಿಪಿ ಐಡಿ ಕ್ಲೈಂಟ್ ಐಡಿ ಎದುರಾಗಿ ಸದಸ್ಯರ ಮೊಬೈಲ್ ಸಂಖ್ಯೆಯನ್ನು ನೋಂದಾಯಿಸಿಕೊಂಡಿದ್ದರೆ, ಸದಸ್ಯರು 9212993399ಗೆ SMS: MYEPWD<space> E-Voting Event Number+Folio No. ಅಥವಾ DP ID Client ID ಎಂಬುದಾಗಿ ಎಸ್‌ಎಂಎಸ್ ಮಾಡಬೇಕು.
ಬಿ. ಉದಾ: ಎನ್‌ಎಸ್‌ಡಿಎಲ್‌ಗಾಗಿ: MYEPWD<SPACE> IN12345612345678
ಸಿ. ಉದಾ: ಸಿಡಿಎಸ್‌ಎಲ್‌ಗಾಗಿ: MYEPWD<SPACE> 1402345612345678
ಡಿ. ಉದಾ: ಭೌತಿಕವಾಗಿ: MYEPWD<SPACE> XXX1234567890
ಇ. ಫೋಲಿಯೋ ಸಂಖ್ಯೆ/ಡಿಪಿ ಐಡಿ ಕ್ಲೈಂಟ್ ಐಡಿ ಎದುರಾಗಿ ಸದಸ್ಯರು ತಮ್ಮ ಇ–ಮೇಲ್ ಅಥವಾ ಮೊಬೈಲ್ ನಂಬರನ್ನು https://evoting.karvy.com ನ ಹೋಂ ಪೇಜ್‌ನಲ್ಲಿ ನೋಂದಾಯಿಸಿಕೊಂಡಿದ್ದರೇ ಸದಸ್ಯರು "Forgot password"ನ್ನು ಕ್ಲಿಕ್ ಮಾಡಿ, ಫೋಲಿಯೋ ಸಂಖ್ಯೆ ಅಥವಾ ಡಿಪಿ ಐಡಿ ಕ್ಲೈಂಟ್ ಐಡಿ ಮತ್ತು ಪ್ಯಾನನ್ನು ಎಂಟರ್ ಮಾಡಿದಲ್ಲಿ ಪಾಸ್‌ವರ್ಡನ್ನು ಪಡೆದುಕೊಳ್ಳಬಹುದಾಗಿದೆ.
ಎಫ್. ಸದಸ್ಯರು ಕಾರ್ವಿಸ್‌ನ ಶುಲ್ಕ ರಹಿತ ಸಂಖ್ಯೆ 1–800–3454–001ಗೆ ಕರೆ ಮಾಡಬಹುದಾಗಿದೆ ಅಥವಾ evoting@karvy.com ಗೆ ಇ–ಮೇಲ್ ಮಾಡಬಹುದಾಗಿದೆ.

ಸದಸ್ಯರು ಈಗಾಗಲೇ ಕಾರ್ವಿ ಇ–ವೋಟಿಂಗ್ ವೇದಿಕೆಯಲ್ಲಿ ನೋಂದಾಯಿತರಾಗಿದ್ದಲ್ಲಿ ಅವರ ಹಾಲಿ ಯೂಸರ್ ಐಡಿ ಮತ್ತು ಪಾಸ್‌ವರ್ಡನ್ನು ಅದೃಶ್ಯ ಇ–ಮತದಾನ ಮೂಲಕದ ಮತ ಹಾಕಲು ಉಪಯೋಗಿಸಬಹುದಾಗಿರುತ್ತದೆ.

4. ಕಂಪನಿಗಳ ಕಾಯಿದೆ 2013ರ ಅಧ್ಯಾಯ VII ರ ನಿಯಮ 20(3) (VI) ರನ್ವಯ ಇ–ಮತದಾನದ ಅವಧಿಯು ಶನಿವಾರ, ಜುಲೈ 18, 2015 ರಂದು ಬೆಳಿಗ್ಗೆ 9.00ಕ್ಕೆ ಆರಂಭವಾಗುತ್ತದೆ ಮತ್ತು ಮಂಗಳವಾರ, ಜುಲೈ 21, 2015 ರಂದು ಸಂಜೆ 5 ಗಂಟೆಗೆ ಮುಕ್ತಾಯವಾಗುತ್ತದೆ.
5. ಇ–ಮತದಾನದ ಮಾಡ್ಯೂಲನ್ನು ಜುಲೈ 21, 2015 ರಂದು ಸಂಜೆ 5.00 ನಿಸ್ಸಂಪರ್ಕಗೊಳಿಸಲಾಗುತ್ತದೆ. ಅಂದರೆ ಮಂಗಳವಾರ ಜುಲೈ 21, 2015 ರಂದು ಸಂಜೆ 5.00 ರ ನಂತರ ಮತದಾನಕ್ಕೆ ಅನುಮತಿ ನೀಡುವುದಿಲ್ಲ.
6. ಇ–ಮತದಾನದ ಮಾಡಿದ ಸದಸ್ಯರು ಸಭೆಗೆ ಹಾಜರಾಗಬಹುದಾಗಿರುತ್ತದೆ, ಆದರೆ ಮತ್ತೊಮ್ಮೆ ಅವರ ಮತದಾನ ಮಾಡುವಂತಿಲ್ಲ.
7. ಇ–ಮತದಾನದ ಮೂಲಕ ಮತ ಹಾಕದ ಸದಸ್ಯರು, ಸಭೆಯಲ್ಲಿ ಬ್ಯಾಲೆಟ್ ಪೇಪರ್ ಮೂಲಕ ಮತ ಹಾಕಬಹುದಾಗಿರುತ್ತದೆ.
8. ಎಲ್ಲಾ ಸದಸ್ಯರಿಗೂ ವಾರ್ಷಿಕ ಮಹಾಸಭೆಯ ಸೂಚನಾ ಪತ್ರಗಳನ್ನು ಮತ್ತು ಇ–ಮತದಾನದ ಕ್ರಮಗಳನ್ನು ಈಗಾಗಲೇ ರವಾನಿಸಲಾಗಿದೆ ಮತ್ತು ಕಂಪನಿಯ ವೆಬ್‌ಸೈಟ್ www.wipro.com ನಲ್ಲೂ ಅಥವಾ ನಮ್ಮ ರಿಜಿಸ್ಟಾರ್‌ರವರಲ್ಲೂ ಮತ್ತು ಷೇರು ವರ್ಗಾವಣೆ ಏಜೆಂಟ್‌ರಾದ www.karvy.com ನಲ್ಲೂ ಸಹ ಲಭ್ಯವಿರುತ್ತದೆ.
9. ಸದಸ್ಯರು ಇಲೆಕ್ಟ್ರಾನಿಕ್ ಮತದಾನಕ್ಕೆ ಸಂಬಂಧಿಸಿದ ಯಾವುದೇ ದೂರುಗಳ ಬಗ್ಗೆ ಶ್ರೀ ರಜಿತ ಚೊಲ್ಲೇಟಿಯವರಿಗೆ ಇಮೇಲ್ ಐಡಿ rajitha.cholleti@karvy.com ಮೂಲಕ ಬರೆದುಕೊಳ್ಳಬೇಕು ಅಥವಾ ಬೆಳಿಗ್ಗೆ 09 ರಿಂದ ಸಂಜೆ 05 ರವರೆಗಿನ ಅವಧಿಯಲ್ಲಿ ಸಂಖ್ಯೆ 080–23420818ಗೆ ಕರೆ ಮಾಡಿ ಬಗೆಹರಿಸಿಕೊಳ್ಳಬೇಕು.

ಕಂಪನಿಗಳ ಕಾಯಿದೆ 2013 ಮತ್ತು ಲಿಸ್ಟಿಂಗ್ ಅಗ್ರಿಮೆಂಟ್‌ನ ಖಂಡ 16ರ ಅನುಸಾರ ಜುಲೈ 22, 2015 (ಬುಧವಾರ) ರಂದು, ಮಾರ್ಚ್ 31, 2015ಕ್ಕೆ ಕೊನೆಗೊಂಡ ವರ್ಷಕ್ಕೆ ಅಂತಿಮ ಡಿವಿಡೆಂಡ್ ಪಾವತಿಗೆ ಅರ್ಹರಾಗುವ ಸದಸ್ಯರನ್ನು ನಿರ್ಧಾರ ಮಾಡಲು ಕಂಪನಿಯ ಸದಸ್ಯರುಗಳ ರಿಜಿಸ್ಟರನ್ನು ಮುಚ್ಚಲಾಗುತ್ತದೆ.

ಒಬ್ಬ ಸದಸ್ಯರು ಸಭೆಗೆ ಹಾಜರಾಗಬಹುದು ಮತ್ತು ಮತದಾನ ಮಾಡಬಹುದು ಹಾಗೆಯೇ ಅವರ ಬದಲಾಗಿ ಸಭೆಗೆ ಹಾಜರಾಗಲು ಮತ್ತು ಮತದಾನ ಮಾಡಲು ಪ್ರಾಕ್ಸಿಯನ್ನು ನೇಮಿಸಬಹುದಾಗಿದ್ದು ಅಂತಹ ಪ್ರಾಕ್ಸಿಯು ಕಂಪನಿಯ ಸದಸ್ಯನೇ ಆಗಿರಬೇಕಿಲ್ಲ. ಪ್ರಾಕ್ಸಿಯನ್ನು ನೇಮಿಸಲು ಅವಶ್ಯವಿರುವ ದಾಖಲೆಗಳನ್ನು ಸಭೆಯು ನಡೆಯುವ ಕನಿಷ್ಠ 48 ಗಂಟೆಗಳ ಮುಂಚೆ ನೋಂದಾಯಿತ ಕಛೇರಿಯಲ್ಲಿ ಸಲ್ಲಿಸಿರಬೇಕು.

ಆಡಳಿತ ಮಂಡಳಿಯ ಆದೇಶದನುಸಾರ
ವಿಪ್ರೋ ಲಿಮಿಟೆಡ್‌ನ ಪರವಾಗಿ
ಎಂ. ಸನಾವುಲ್ಲಾ ಖಾನ್
ಕಂಪನಿ ಕಾರ್ಯದರ್ಶಿ

ಸ್ಥಳ: ಬೆಂಗಳೂರು, ಭಾರತ
ದಿನಾಂಕ: ಜೂನ್ 27, 2015